ಕರ್ನಾಟಕ ಸರ್ಕಾರ

# ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಗಳ ಕಾರ್ಯಾಲಯ, (ಐ.ಎಂ.ಎ. ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು) ಬೆಂಗಳೂರು.

## ಪತ್ರಿಕಾ ಪ್ರಕಟಣೆ

1. ಕ್ಲೇಮು ಅರ್ಜಿಗಳ ಸ್ವೀಕೃತಿಯು ದಿನಾಂಕ: 25-11-2020 ರಿಂದ ಪ್ರಾರಂಭವಾಗಲಿದ್ದು, ಕ್ಲೇಮು ಅರ್ಜಿಗಳನ್ನು ಸ್ವೀಕರಿಸಲು ಪ್ರಾರಂಭಿಸಿದ ದಿನಾಂಕದಿಂದ ಒಂದು ತಿಂಗಳಿನಲ್ಲಿ ಅಂದರೆ ದಿನಾಂಕ: 24-12-2020 ರೊಳಗಾಗಿ ಸಲ್ಲಿಸಬಹುದಾಗಿರುತ್ತದೆ. ತದ ನಂತರ ಯಾವುದೇ ಕ್ಲೇಮು ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

2. ಐ.ಎಂ.ಎ ಠೇವಣಿದಾರರು ಯಾವುದೇ ಬೆಂಗಳೂರು-1/ಕರ್ನಾಟಕ-1/ಅಟಲ್ ಜೀ ಜನಸ್ನೇಹಿ ಕೇಂದ್ರದಲ್ಲಿರುವ ಆಪರೇಟರ್‌ರ ಸಹಾಯದಿಂದ ಆನ್‌ಲೈನ್ ಮುಖಾಂತರ ಕ್ಲೇಮು ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ ಅಥವಾ ಎಲ್ಲಿಯಾದರೂ ತಮ್ಮದೇ ಆದ ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.

3. ಆನ್‌ಲೈನ್ ಕ್ಲೇಮು ಅರ್ಜಿಗಳನ್ನು 02 ಹಂತಗಳಲ್ಲಿ ಸಲ್ಲಿಸಬಹುದು. 1 ನೇ ಹಂತದಲ್ಲಿ ಅರ್ಜಿದಾರರು ತಮ್ಮ ವಯುಕ್ತಿಕ ವಿವರಗಳಾದ ಮೊಬೈಲ್ ಸಂಖ್ಯೆ, ಬ್ಯಾಂಕ್ ಖಾತೆ ಸಂಖ್ಯೆ ಮುಂತಾದವುಗಳನ್ನು ಸಲ್ಲಿಸಬೇಕಾಗಿರುತ್ತದೆ. 2ನೇ ಹಂದತಲ್ಲಿ ಐ.ಎಂ.ಎ ಸಂಬಂಧಿಸಿದ ಯೋಜನಾವಾರು ಹೂಡಿಕೆ ವಿವರಗಳನ್ನು ಸಲ್ಲಿಸಬೇಕಾಗಿರುತ್ತದೆ.

4. ಠೇವಣಿದಾರರು ಆನ್ ಲೈನ್ ಅರ್ಜಿಗಳನ್ನು ಆಧಾರ್ ಮೂಲಕ ಅಥವಾ ತನ್ನ ಬ್ಯಾಂಕ್ ಖಾತೆಯಿಂದ ಸಕ್ಷಮ ಪ್ರಾಧಿಕಾರದ ಬ್ಯಾಂಕ್ ಖಾತೆಗೆ ರೂ.1/- ನ್ನು ವರ್ಗಾಯಿಸಿದ ಯು.ಟಿ.ಆರ್ ಸಂಖ್ಯೆ ಮೂಲಕ ಅರ್ಜಿದಾರರು ಸಲ್ಲಿಸಬಹುದು. ಸಕ್ಷಮ ಪ್ರಾಧಿಕಾರದ ಬ್ಯಾಂಕ್ ಖಾತೆ ಸಂಖ್ಯೆ 6442116442 ಮತ್ತು ಐ.ಎಫ್.ಎಸ್.ಸಿ ಸಂಕೇತ ಹೆಚ್‌ಡಿಎಫ್‌ಸಿ0001748 ಆಗಿರುತ್ತದೆ.

5. ಮುಂದುವರೆದು ಐ.ಎಂ.ಎ ವಹಿವಾಟಿಗೆ ಬಳಸಿದ ಠೇವಣಿದಾರರ ಬ್ಯಾಂಕ್ ಖಾತೆಯು ಚಾಲನೆಯಲ್ಲಿದ್ದಲ್ಲಿ ಐ.ಎಂ.ಎ ಯೋಜನೆಗಳಿಗೆ ಸಂಬಂಧಿಸಿದ ದಾಖಲೆಗಳಾದ ಬಾಂಡ್ ಪ್ರಮಾಣಪತ್ರ, ಷೇರು ಪ್ರಮಾಣ ಪತ್ರ ಇತ್ಯಾದಿಗಳನ್ನು ಸಲ್ಲಿಸಬೇಕಾಗಿರುವುದಿಲ್ಲ. ಇಲ್ಲದಿದ್ದಲ್ಲಿ ದಾಖಲೆಗಳನ್ನು ಸಲ್ಲಿಸಬೇಕಾಗಿರುತ್ತದೆ.

6. ಠೇವಣಿದಾರರು ಸಲ್ಲಿಸಿದ ಹೂಡಿಕೆ ವಿವರಗಳು ಐ.ಎಂ.ಎ ನಿರ್ವಹಿಸುತ್ತಿದ್ದ ದತ್ತಾಂಶದೊಂದಿಗೆ ಹೊಂದಾಣಿಕೆಯಾದಲ್ಲಿ ಠೇವಣಿದಾರರು ಯಾವುದೇ ಹೂಡಿಕೆ ರಸೀದಿಗಳನ್ನು ಸಲ್ಲಿಸಬೇಕಾಗಿರುವುದಿಲ್ಲ. ಇಲ್ಲದಿದ್ದಲ್ಲಿ ಹೂಡಿಕೆ ರಸೀದಿಗಳನ್ನು ಸಲ್ಲಿಸಬೇಕಾಗಿರುತ್ತದೆ.

7. ಆನ್‌ಲೈನ್ ಅರ್ಜಿದಾರರು ಮೇಲ್ಕಂಡಂತೆ ವಿವರಿಸಿರುವ ದಾಖಲೆಗಳನ್ನು ಸಲ್ಲಿಸಿದ್ದಲ್ಲಿ, ಸಂಬಂಧಿಸಿದ ಕಾರ್ಯವ್ಯಾಪ್ತಿಯ ತಹಶೀಲ್ದಾರರಿಂದ ಕ್ಲೇಮು ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕದಿಂದ 60 ದಿನಗಳ ಒಳಗಾಗಿ ಅಂದರೆ ದಿನಾಂಕ:24-02-2021 ರ ಒಳಗಾಗಿ ಇ-ಧೃಡೀಕರಿಸುವುದು ಅಗತ್ಯವಾಗಿರುತ್ತದೆ.

8. ಆನ್‌ಲೈನ್ ಅರ್ಜಿಗಳನ್ನು ಆಧಾರ್ ಅವಲಂಭಿತ ಓ.ಟಿ.ಪಿ ಮೂಲಕ ಅಥವಾ ಐ.ಎಂ.ಎ ವಹಿವಾಟಿಗೆ ಬಳಸಿದ ಬ್ಯಾಂಕ್ ಖಾತೆ ಹೊರತುಪಡಿಸಿದ ಬ್ಯಾಂಕ್ ಖಾತೆಯಿಂದ ಸಕ್ಷಮ ಪ್ರಾಧಿಕಾರದ ಬ್ಯಾಂಕ್ ಖಾತೆಗೆ ರೂ.1/- ನ್ನು ವರ್ಗಾಯಿಸಿದ ಯು.ಟಿ.ಆರ್ ಸಂಖ್ಯೆ ಮೂಲಕ ಅರ್ಜಿದಾರರು ಸಲ್ಲಿಸಬಹುದು. ಆದರೆ ಇಂತಹವರು ಕ್ಲೇಮು ಮೊತ್ತ ಸ್ವೀಕರಿಸುವ ಪೂರ್ವದಲ್ಲಿ ಹೆಚ್ಚಿನ ಧೃಡೀಕರಣ ಪ್ರಕ್ರಿಯೆಗೆ ಒಳಪಡುವ ಅಗತ್ಯತೆ ಇದ್ದು, ಆಧಾರ್ ಬಯೋಮೆಟ್ರಿಕ್ ಮೂಲಕ ಅಥವಾ ರೂ.1/- ನ್ನು ಐ.ಎಂ.ಎ ವಹಿವಾಟಿಗೆ ಬಳಸಿದ ಬ್ಯಾಂಕ್ ಖಾತೆಯಿಂದ ಸಕ್ಷಮ ಪ್ರಾಧಿಕಾರದ ಬ್ಯಾಂಕ್ ಖಾತೆಗೆ ನಿಗಧಿಸಿದ ಕೊನೆಯ ದಿನಾಂಕದಿಂದ 60 ದಿನಗಳೊಳಗಾಗಿ ಅಂದರೆ 24 ಫೆಬ್ರವರಿ 2021 ಒಳಗಾಗಿ ವರ್ಗಾಯಿಸುವುದು. 60 ದಿನಗಳ ಅವಧಿಯ ನಂತರ, ಅಂತಹ ಅರ್ಜಿದಾರರು ಯಾವುದಾರರೂ ಗುರುತಿನ ದಾಖಲೆಗಳು ಅಂದರೆ ಚುನಾವಣೆ ಗುರುತಿನ ಚೀಟಿ, ಚಾಲನಾ ಪರವಾನಿಗೆ, ಪಾಸ್‌ಪೋರ್ಟ್ ಇತ್ಯಾದಿ ದಾಖಲೆಗಳೊಂದಿಗೆ ಈ ಪ್ರಾಧಿಕಾರದ ಕಛೇರಿಗೆ ಭೌತಿಕವಾಗಿ ಹಾಜರಾಗಿ ತಮ್ಮನ್ನು ಧೃಡೀಕರಿಸಿಕೊಳ್ಳಲು ಅವಕಾಶವಿರುತ್ತದೆ.

9. ಸ್ವೀಕರಿಸಿದ ಮಾಹಿತಿಗಳಾದ ಮೊಬೈಲ್ ಸಂಖ್ಯೆ, ಬ್ಯಾಂಕ್ ಖಾತೆ ಸಂಖ್ಯೆ, ಆಧಾರ್ ಸಂಖ್ಯೆ, ಪ್ಯಾನ್ ಸಂಖ್ಯೆ ಕ್ಲೈಂಟ್ ಐ.ಡಿ., ಹೂಡಿಕೆ ವಿವರಗಳನ್ನು ಸಂಬಂಧಿಸಿದ ದತ್ತಾಂಶಗಳೊಂದಿಗೆ ನೈಜ ಸಮಯದಲ್ಲಿ ಧೃಡೀಕರಣ ಮಾಡಲಾಗುವುದು.

Scanned by CamScanner

10. ಹೆಸರು ಮತ್ತು ಭಾವಚಿತ್ರದ ಹೊಂದಾಣಿಕೆಯನ್ನು ತಂತ್ರಾಂಶದ ಮೂಲಕ ಪರಿಶೀಲಿಸಲಾಗುವುದು. ಹೆಸರನ್ನು ಐ.ಎಂ.ಎ ದಾಖಲೆಗಳು, ಆಧಾರ್, ಬ್ಯಾಂಕ್ ಹಣ ಸಂದಾಯದ ದತ್ತಾಂಶದೊಂದಿಗೆ ಹೊಂದಾಣಿಕೆ ಮಾಡಲಾಗುವುದು. ಭಾವಚಿತ್ರವನ್ನು ಐ.ಎಂ.ಎ ದಾಖಲೆಗಳು, ಆಧಾರ್ ಮತ್ತು ಲೈವ್ ಭಾವಚಿತ್ರದೊಂದಿಗೆ ಹೊಂದಾಣಿಕೆ ಮಾಡಲಾಗುವುದು.

11. ಠೇವಣಿದಾರರು ಮರಣ ಹೊಂದಿದ್ದಲ್ಲಿ ಅಥವಾ ಆಸ್ಪತ್ರೆಗೆ ದಾಖಲಾಗಿದ್ದಲ್ಲಿ ಹೂಡಿಕೆದಾರರ ನಾಮ ನಿರ್ದೇಶಕರು ಅಥವಾ ಕಾನೂನು ಬದ್ಧ ಉತ್ತರಾಧಿಕಾರಿಗಳು ಸಂಬಂಧಿಸಿದ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬಹುದು.

12. ಠೇವಣಿದಾರರು ಆಸ್ಪತ್ರೆಗೆ ದಾಖಲಾದ ಪ್ರಕರಣಗಳಲ್ಲಿ ಅಂತಹ ಅರ್ಜಿಗಳನ್ನು ಈ ಸಕ್ಷಮ ಪ್ರಾಧಿಕಾರವು ಆನ್‌ಲೈನ್ ಮೂಲಕ 48 ಗಂಟೆಗಳ ಒಳಾಗಾಗಿ ಅನುಮೋದಿಸಿದ ನಂತರ ಕ್ಲೇಮು ಅರ್ಜಿಯನ್ನು ಎರಡನೇ ಹಂತಕ್ಕೆ ಮುಂದುವರೆಸಲು ಅವಕಾಶವನ್ನು ನೀಡಲಾಗಿದೆ.

13. ಹೂಡಿಕೆದಾರರಿಗೆ ಕ್ಲೇಮು ಅರ್ಜಿ ಸಲ್ಲಿಕೆಗೆ ಸಂಬಂಧಿಸಿದಂತೆ ಮಾಹಿತಿಯನ್ನು ಅರ್ಜಿ ಸಲ್ಲಿಕೆ ದಿನಾಂಕದ ಮುಂಚಿತವಾಗಿ ಮಾಹಿತಿಯನ್ನು ನೀಡಿ ಅರ್ಜಿ ಸಲ್ಲಿಕೆಗೆ ಮಾರ್ಗದರ್ಶನವನ್ನು ನೀಡಲಾಗಿದೆ. ಇದಲ್ಲದೇ ಈ ಬಗ್ಗೆ ಮಾಧ್ಯಮದ ಮುಖಾಂತರ, ಪತ್ರಿಕಾ ಪ್ರಕಟಣೆ, ಎಸ್.ಎಂ.ಎಸ್ ಸಂದೇಶವನ್ನು ರವಾನಿಸುವ ಮೂಲಕ, pre-recorded ಕರೆಗಳ ಮೂಲಕ ಹಾಗೂ ಅಂಚೆ ಮೂಲಕ ಅರ್ಜಿ ಸಲ್ಲಿಕೆ ಬಗ್ಗೆ ಮಾಹಿತಿ ಪ್ರಚುರ ಮಾಡಲಾಗುತ್ತಿದೆ.

14. ಐ.ಎಂ.ಎ ಕ್ಲೇಮು ಅರ್ಜಿ ಸಲ್ಲಿಕೆ ಪ್ರಕ್ರಿಯೆ ಕುರಿತು ಹೆಚ್ಚಿನ ಮಾಹಿತಿಗಾಗಿ "imaclaims.karnataka.gov.in" ವೆಬ್‌ಸೈಟ್‌ಗೆ ಬೇಟಿ ನೀಡಿ splocaima20@gmail.com, ಇ-ಮೇಲ್‌ಗೆ ವ್ಯಾಟ್ಸ್ ಆಪ್ ಸಂಖ್ಯೆ 7975568880 ಗೆ ಸಂಪರ್ಕಿಸಬಹುದು. ಅಥವಾ ಕಾಲ್ ಸೆಂಟರ್ ಸಂಖ್ಯೆ "080–46885959" ಕ್ಕೆ ಬೆಳಿಗ್ಗೆ 08 ಗಂಟೆಯಿಂದ ಸಂಜೆ 08 ಯೊಳಗೆ ಕರೆ ಮಾಡಬಹುದು.

15. ಕ್ಲೇಮು ಮೊತ್ತವನ್ನು ಮಾನ್ಯ ವಿಶೇಷ ನ್ಯಾಯಾಲಯ, ಬೆಂಗಳೂರು ಇಲ್ಲಿ ಐ.ಎಂ.ಎ ಸಂಸ್ಥೆಯ ಚರ ಹಾಗೂ ಸ್ಥಿರಾಸ್ತಿಗಳ ಮುಟ್ಟುಗೋಲು ಆದೇಶವನ್ನು ಅಂತಿಮಗೊಳಿಸಿದ ನಂತರ ಇತ್ಯರ್ಥಗೊಳಿಸಲಾಗುವುದು. ನ್ಯಾಯಾಲಯದ ಐ.ಎಂ.ಎ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಗೊಳಿಸಲು ವಿಶೇಷ ನ್ಯಾಯಾಲಯವನ್ನು ಸ್ಥಾಪಿಸಲಾಗಿದ್ದು ಅಂತಿಮ ಮುಟ್ಟುಗೋಲು ಆದೇಶವನ್ನು ಮುಂದಿನ ಆರು ತಿಂಗಳಿನಲ್ಲಿ ನಿರೀಕ್ಷಿಸಲಾಗಿದೆ ಹಾಗೂ ಅದರಂತೆ ಈ ಸಕ್ಷಮ ಪ್ರಾಧಿಕಾರವು ಹರಾಜು ಪ್ರಕ್ರಿಯೆಯನ್ನು ಕೈಗೊಳ್ಳುತ್ತದೆ.

16. ಐ.ಎಂ.ಎ. ಹಾಗೂ ಅದರ ಅಂಗಸಂಸ್ಥೆಗಳ ರೂ.475 ಕೋಟಿಯ ಸ್ಥಿರ ಹಾಗೂ ಚರಾಸ್ತಿಗಳನ್ನು ಈಗಾಗಲೇ ಕರ್ನಾಟಕ ಸರ್ಕಾರವು ಮುಟ್ಟುಗೋಲು ಮಾಡಿರುತ್ತದೆ. ಈ ವಂಚನೆ ಪ್ರಕರಣದಲ್ಲಿ ಸುಮಾರು ರೂ.2,900 ಕೋಟಿ ಮೊತ್ತವು ಹೂಡಿಕೆಯಾಗಿರುವುದಾಗಿ ಅಂದಾಜಿಸಲಾಗಿದ್ದು ಈ ಪೈಕಿ ರೂ.1,500 ಕೋಟಿಯನ್ನು ಈಗಾಗಲೇ ಹೂಡಿಕೆದಾರರು returns ರೂಪದಲ್ಲಿ ಮೊತ್ತವನ್ನು ಸ್ವೀಕರಿಸಿರುತ್ತಾರೆ.

ಸಹಿ/-

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ,
ಕೆ.ಪಿ.ಐ.ಡಿ ಕಾಯ್ದೆ 2004,
ಐ.ಎಂ.ಎ ಮತ್ತು ಇತರೆ ವಂಚನೆ ಪ್ರಕರಣಗಳು
ಬೆಂಗಳೂರು

Scanned by CamScanner